**2 ನೇ ಹೆಚ್ಚುವರಿ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಗೋಕಾಕ.**

ಸಿ.ಸಿ. ನಂ.2273/2017

ಸಿಡಬ್ಲ್ಯೂ.3 ಪಿಡಬ್ಲ್ಯೂ3

ಸಾಕ್ಷಿಯ ಹೆಸರು - ಸಂತೋಷ ಬಸವರಾಜ ಹಾದಿಮನಿ

ವಯಸ್ಸು - 43 ವರ್ಷ

ಉದ್ಯೋಗ - ಅಬಕಾರಿ ಮುಖ್ಯ ಪೇದೆ

ವಾಸ - ಹಿರೆಕೆರೂರ ಜಿ ಹಾವೇರಿ

ದಿನಾಂಕಃ 19-11-2024ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದಃ**

ನಾನು ಸಪ್ಟೆಂಬರ 2016 ರಿಂದ ಅಗಸ್ಟ 2023 ರವರೆಗೆ ಗೋಕಾಕ ಅಬಕಾರಿ ಇಲಾಖೆಯಲ್ಲಿ ಅಬಕಾರಿ ರಕ್ಷಕ ಅಂತಾ ಕೆಲಸ ಮಾಡಿರುತ್ತೇನೆ.

ದಿಃ 03-01-2017 ರಂದು ಚಾಸಾ-1 ರವರು ನನ್ನನ್ನು ಕಚೇರಿಯಲ್ಲಿ ಇದ್ದಾಗ ಕರೆದು ಖಚಿತ ಬಾತ್ಮಿ ಮೇರೆಗೆ ಗುಜನಾಳ ಗ್ರಾಮದಲ್ಲಿ ಅಬಕಾರಿ ದಾಳಿ ಮಾಡುವದಿದೆ ಅದಕ್ಕೆ ನೀನು ನನ್ನ ಜೊತೆ ಬರಬೇಕೆಂದು ಮೌಖಿಕ ಆದೇಶದ ಮೇರೆಗೆ ತಿಳಿಸಿದಾಗ ನಾನು ಅದಕ್ಕೆ ಒಪ್ಪಿ ರಾತ್ರಿ 7-00 ಗಂಟೆಗೆ ನಾನು ಹಾಗೂ ನಮ್ಮ ಚಾಸಾ-1 ಹಾಗೂ ಸಿಬ್ಬಂದಿಯೊಂದಿಗೆ ಖಾಸಗಿ ವಾಹನ ಟ್ರ್ಯಾಕ್ಸ ನಲ್ಲಿ ಕುಳಿತುಕೊಂಡು ಗೋಕಾಕನ್ನು ಬಿಟ್ಟು ಅಂಕಲಗಿ ಗ್ರಾಮಕ್ಕೆ 7-45 ಗಂಟೆಗೆ ತಲುಪಿ ಪಂಚರಿಗಾಗಿ ಹುಡುಕಾಡಿದಾಗ ಒಬ್ಬ ವ್ಯಕ್ತಿ ನಮಗೆ ಸಿಕ್ಕು ಖಚಿತ ಬಾತ್ಮಿ ಮೇರೆಗೆ ದಾಳಿ ಮಾಡುವದಿದೆ ಅಲ್ಲಿ ನಡೆದ ಘಟನೆಗೆ ಪಂಚರಾಗಬೇಕು ಎಂದು ಕೇಳಿಕೊಂಡಾಗ ರಾಜು ಲಕ್ಷಣ ಕೊಪ್ಪದ ಎಂಬ ವ್ಯಕ್ತಿಯು ಒಪ್ಪಿ ಕೊಂಡನು. ಆತನನ್ನು ಕರೆದುಕೊಂಡು ಗುಜನಾಳ ಗ್ರಾಮಕ್ಕೆ ಊರಿನಿಂದ ಹೊರಕ್ಕೆ ಗಾಡಿಯನ್ನು ನಿಲ್ಲಿಸಿದೆವು ಹಾಗೂ ಚಾಸಾ-1 ರವರು ಎರಡು ತಂಡಗಳನ್ನಾಗಿ ಮಾಡಿ ಒಂದು ತಂಡದಲ್ಲಿ ಒಬ್ಬ ಪಂಚನನ್ನು ಇನ್ನೊಂದು ತಂಡದಲ್ಲಿ ನನ್ನು ಪಂಚರಾಗಲು ಚಾಸಾ-1 ರವರು ಕೇಳಿಕೊಂಡರು ಅದಕ್ಕೆ ನಾನು ಒಪ್ಪಿ , ಅಲ್ಲಿಂದ ಕುಡುಕರ ಸೊಗಿನಲ್ಲಿ ಗುಜನಾಳ ಗುಡ್ಡದ ಕಡೆ ಹೊರಟೆವು. ಆಗ ಒಬ್ಬ ಆಸಾಮಿಯು ನಮ್ಮನ್ನು ನೋಡಿ ಓಡ ತೋಡಗಿದನು. ಆತನನ್ನು ನಮ್ಮೆಲ್ಲ ಸಿಬ್ಬಂದಿ ಬೆನ್ನು ಹತ್ತಿ ಹಿಡಿಯಲು ಹೋದಾಗ ತಪ್ಪಿ ಸಿಕೊಂಡನು. ಆತನು ಇದ್ದ ಜಾಗವನ್ನು ತಪಾಸಿಸಲಾಗಿ ಒಂದು ಚೀಲದಲ್ಲಿ ರಬ್ಬರ ಟ್ಯೂಬದಲ್ಲಿ ಘಾಟ ವಾಸನೆಯುಳ್ಳ ದ್ರವ್ಯ ಇರುವದು ಕಂಡು ಬಂದಿತು. ಅದನ್ನು ಪರಿಶೀಲಿಸಲಾಗಿ ಅದು ಕಳ್ಳಭಟ್ಟಿ ಸರಾಯಿ ಇರುವದು ಖಚಿತವಾಯಿತು.

ಆ ಟ್ಯೂಬನಿಂದ 180 ಎಂ.ಎಲ. ಸಾಮರ್ಥ್ಯದ ಒಂದು ಬಾಟಲಿಯಲ್ಲಿ ಕಳ್ಳಭಟ್ಟಿ ಸರಾಯಿಯನ್ನು ಸ್ಯಾಂಪಲಗೆ ತೆಗೆಯಲಾಯಿತು ಹಾಗೂ ಆ ಸ್ಯಾಂಪಲ ಬಾಟಲಿಗೆ ಬಿಳಿ ಬಟ್ಟೆಯಿಂದ ಸುತ್ತಿ ದಾರದಿಂದ ಕಟ್ಟಿ ಅರಗಿನಿಂದ ಒತ್ತಿ ಇಲಾಖಾ ಮೊಹರಿನಿಂದ ಸ್ಯಾಂಪಲ ಚೀಟಿಗೆ ಒತ್ತಲಾಯಿತು ಹಾಗೂ ಸ್ಯಾಂಪಲ ಚೀಟಿಯನ್ನು ಅಲ್ಲಿಯೇ ತಯಾರಿಸಿ ಅಧಿಕಾರಿಗಳು ಹಾಗೂ ಪಂಚರ ಸಹಿಯನ್ನು ಪಡೆಯಲಾಯಿತು. ಚಾಸಾ-1 ಮೇರೆಗೆ ಟ್ಯೂಬನ್ನು ಕಟ್ಟಲಾಯಿತು ಹಾಗೂ ಅಲ್ಲಿದ್ದಂತಹ ಕೆಲ ವ್ಯಕ್ತಿಗಳನ್ನು ಆ ವ್ಯಕ್ತಿಯ ಬಗ್ಗೆ ವಿಚಾರಿಸಲಾಗಿ ಅವರು ಆ ವ್ಯಕ್ತಿಯು ರಾಜನಕಟ್ಟಿಯವನು ಹಾಗೂ ಕಳ್ಳಭಟ್ಟಿಯನ್ನು ಸಾಗಾಟ

ಮಾಡಿಕೊಂಡು ಬಂದು ದಿನಾಲು ಮಾರುತ್ತಾನೆ ಎಂದು ತಿಳಿಸಿದರು. ನಂತರ ಆ ಮುದ್ದೆ ಮಾಲನ್ನು ಜಪ್ತಿ ಮಾಡಿಕೊಂಡು ಊರಿನ ಕೆಳಗೆ ಹೋಗಿ ಊರಿನ ಜನರನ್ನು ಓಡಿ ಹೋದ ಬಗ್ಗೆ ವಿಚಾರಿಸಲಾಗಿ ಅವರು ಆತನ ಹೆಸರನ್ನು ಬಸವಣ್ಣಿ ಭೀಮಪ್ಪಾ ಜಿಜನಾಯಿಕ ಸಾಃ ರಾಜನಕಟ್ಟಿ ಎಂದು ತಿಳಿಸಿದರು ಹಾಗೂ ಆತನು ಕಳ್ಳಭಟ್ಟಿ ಸರಾಯಿಯನ್ನು ಸಾಗಾಟ ಮಾಡಿಕೊಂಡು ಬಂದು ಈ ಸ್ಥಳದಲ್ಲಿ ಮಾರುತ್ತಾನೆ ಅಂತಾ ತಿಳಿಸಿದರು. ಚಾಸಾ-1 ರವರು ಆತನನ್ನು ಬಂಧಿಸಿ ಪ್ರಕರಣ ದಾಖಲ ಮಾಡುತ್ತೇವೆ ಅಂತಾ ತಿಳಿಸಿದರು. ನಂತರ ಊರಿನ ವಾಹನ ನಿಲ್ಲಿಸಿದ ಖಾಸಗಿ ವಾಹನದ ಕಡೆ ಹೋಗಿ ಬ್ಯಾಟರಿ ಬೆಳಕಿನ ಸಹಾಯದಿಂದ ಸಮಯ 8-40 ರಿಂದ 9-30 ಗಂಟೆಯವರೆಗೆ ನಮ್ಮ ಚಾಸಾ-1 ರವರು ಪಂಚನಾಮೆಯನ್ನು ಬರೆದು ಮುಗಿಸಿದರು. ಪಂಚನಾಮೆಯನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು.

ದಿಃ 17-01-2017 ರಂದು ಚಾಸಾ-1 ರವರು ಒಂದು ಮುಚ್ಚಿ ದ ಲಕೋಟೆ ಹಾಗೂ 180 ಎಂ.ಎಲ. ಸಾಮರ್ಥ್ಯದ ಶೀಲ ಮಾಡಿದ ಒಂದು ಬಾಟಲಿಯನ್ನು ನನಗೆ ನೀಡಿ ಇದನ್ನು ರಸಾಯನಿಕ ವಿಶ್ಲೇಷಣಾ ವರದಿ ತರಲು ತಿಳಿಸಿದ ನಿಮಿತ್ಯ ನಾನು ಸದರಿ ದಿನದಂದು ಧಾರವಾಡಗೆ ತೆರಳಿ ಅಲ್ಲಿನ ಸಹಾಯ ರಸಾಯನಿಕ ವಿಶ್ಲೇಷಕರು ಧಾರವಾಡ ರವರಿಗೆ ಸದರಿ ಬಾಟಲಿ ಹಾಗೂ ಲಕೋಟೆಯನ್ನು ನೀಡಿದೆನು. ಸಾಯಂಕಾಲ 4-30 ಗಂಟೆಗೆ ಮುಚ್ಚಿ ದ ಲಕೋಟೆ ಹಾಗೂ ಶೀಲ ಮಾಡಿ ಪ್ಯಾಕ ಮಾಡಿದ 180 ಎಂ.ಎಲ. ಸಾಮರ್ಥ್ಯದ ಶೀಲ ಮಾಡಿದ ಒಂದು ಬಾಟಲಿಯನ್ನು ನನ್ನ ವಶಕ್ಕೆ ಪಡೆದು ಧಾರವಾಡದಿಂದ ಗೋಕಾಕ್ಕೆ ಬಂದೆನು. ದಿಃ 18-01-2017 ರಂದು ಚಾಸಾ-6 ರವರಿಗೆ ಸದರಿ ಲಕೋಟೆ ಹಾಗೂ ಶೀಲ ಮಾಡಿದ ಬಾಟಲಿಯನ್ನು ನೀಡಿ ಸದರಿ ದಿನದಂದು ಹೇಳಿಕೆ ನೀಡಿರುತ್ತೇನೆ.

ಮುದ್ದೆ ಮಾಲನ್ನು ನೋಡಿದರೆ ಗುರುತಿಸುತ್ತೇನೆ. ಅವು ಈಗಾಗಲೇ MO-1 ಎಂದು ಗುರುತಿಸಲಾಗಿದೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ನ್ಯಾಯಾಲಯದ ಮುಂದೆ ಇರುವ ವ್ಯಕ್ತಿಯೇ ಆರೋಪಿಯಾಗಿರುತ್ತಾನೆ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>**

ದಿಃ 03-01-2017 ರಂದು ನಾನು ಕಚೇರಿಯಲ್ಲಿ ಕರ್ತವ್ಯ ನಿಮಿತ್ಯ ಇದ್ದೆನು. ಕಚೇರಿಯಿಂದ ಘಟನಾ ಸ್ಥಳ 32 ಕಿ.ಮೀ ಆಗುತ್ತದೆ, ಅಲ್ಲಿ ಹೋಗಲು ಸುಮಾರು ಒಂದು ತಾಸು ಬೇಕಾಗುತ್ತದೆ. ಗುಜನಾಳಕ್ಕೆ ಹೋಗಲು ಎರಡು ಮಾರ್ಗಗಳು ಇವೆ. ಚಾಸಾ-1 ರವರಿಗೆ 6-50 ಗಂಟೆಗೆ ಮಾಹಿತಿ ಬಂದಿರುತ್ತದೆ. ಚಾಸಾ-1 ರವರು ನಮಗೆ ದಾಳಿ ವಿಷಯ ತಿಳಿಸಲು 10 ನಿಮಿಷ ಬೇಕಾಯಿತು. ನಾವು ಹೋದ ಖಾಸಗಿ ವಾಹನದ ಸಂಖ್ಯೆ ಮತ್ತು ಅದರ ಚಾಲಕನ ಹೆಸರು ಹೇಳಲು ಬರುವುದಿಲ್ಲ. ನಾವು

ಅಂಕಲಗಿಗೆ ಹೋದಾಗ 7-45 ಗಂಟೆಯಾಗಿತ್ತು. ಅಂಕಲಗಿ ಹಳ್ಳಿ ಅಲ್ಲಾ, ನಗರ ಇರುತ್ತದೆ ಎಂದರೆ ಸರಿಯಲ್ಲ, ಅಲ್ಲಿ 10-00 ಗಂಟೆಯವರಿಗೆ ಜನರು ಇರುತ್ತಾರೆ ಎಂದರೆ ನಾನು ಹೋದಾಗ ಜನ ಕಡಿಮೆ ಇದ್ದರು. ಚಾಸಾ-2 ಪಂಚರನ್ನು ಹುಡುಕಲು 10 ನಿಮಿಷ ಆಯಿತು. ಅಂಕಲಗಿಯಿಂದ ಗುಜನಾಳ ಗ್ರಾಮಕ್ಕೆ 2 ಕಿ.ಮೀ. ಇದೆ, ಅಲ್ಲಿಗೆ ಹೋಗಲು 10 ನಿಮಿಷ ಬೇಕಾಗುತ್ತದೆ. ಇನ್ನೊಬ್ಬ ಸಾರ್ವಜನಿಕ ಪಂಚನನ್ನು ಹುಡುಕಲು ಯಾವದೇ ತೊಂದರೆ ಇರಲಿಲ್ಲ, ನಾವು ಪ್ರಯತ್ನಪಟ್ಟು ಹುಡುಕಾಡಿದೆವು ಯಾರು ಒಪ್ಪಲಿಲ್ಲ ಗುಜನಾಳಕ್ಕೆ ಹೋದಾಗ 7-55 ಗಂಟೆಯಾಗಿತ್ತು. ನಿಪಿ-1 ನ್ನು ಊರಿನ ಹೊರಗಡೆ ಘಟನಾ ಸ್ಥಳದಿಂದ ಅರ್ಧ ಕಿ.ಮೀ ಗಾಡಿ ನಿಲ್ಲಿಸಿ ತಯಾರಿಸಿರುತ್ತಾರೆ.

ಗುಜನಾಳ ಗುಡ್ಡಗಾಡು ಪ್ರದೇಶ, ಅಲ್ಲಿ ಕಲ್ಲು ಮುಳ್ಳು, ಗಿಡಗಂಟೆಗಳು ಇದ್ದಾವೆ ಎಂದರೆ ಸರಿ. ಎರಡು ತಂಡಗಳನ್ನು ರಚಿಸಿದ್ದು, ಒಂದೊಂದು ತಂಡದಲ್ಲಿ ತಲಾ ಇಬ್ಬರು ಇದ್ದರು. ಒಂದು ತಂಡ ಪಶ್ಚಿಮದಿಂದ ಇನ್ನೊಂದು ತಂಡ ಪೂರ್ವದಿಂದ ಪ್ರವೇಶ ಮಾಡಿದೆವು. ನಾವು ನಡೆದುಕೊಂಡು ಅರ್ಧ ಕಿ.ಮೀ ಹೋದೆವು. ಸಾಮಾನ್ಯವಾಗ ಗುಡ್ಡಗಾಡದಲ್ಲಿ ಲೈಟ್ ಬೆಳಕು ಇರುವುದಿಲ್ಲ ಎಂದರೆ ಸರಿ. ಆರೋಪಿಯು ಉತ್ತರ ದಿಕ್ಕಿಗೆ ಓಡಿ ಹೋಗಿರುತ್ತಾನೆ. ಆರೋಪಿ ಒಗೆದು ಹೋದ ಚೀಲ ಗೊಬ್ಬರ ಚೀಲ ಇತ್ತು. ಸದರಿ ಚೀಲದಲ್ಲಿ 20 ಲೀಟರ ಇತ್ತು ಎಂದು ನಾವು ನೋಡಿ ಅಂದಾಜಿಸಿರುತ್ತೇವೆ, ಮಾಪನದಿಂದ ಅಳೆದಿರುವುದಿಲ್ಲ. ಘಟನೆ ಸ್ಥಳಕ್ಕೆ ಹೋದಾಗ 8-30 ಗಂಟೆಯಾಗಿತ್ತು. ಅಲ್ಲಿ ಜನರು ಇದ್ದರು, ಅವರನ್ನು ವಿಚಾರಿಸಲಾಗಿ ಅವರು ಆರೋಪಿಯ ವಿವರ ಹೇಳಿದರು, ಅವರ ಹೇಳಿಕೆ ಪಡೆದಿರುವುದಿಲ್ಲ, ಗುಡ್ಡದಿಂದ ಊರಿಗೆ ನಡೆದುಕೊಂಡು ಬರಲು 10 ನಿಮಿಷ ಆಯಿತು. ಮಾಲು ಜಪ್ತು ಮಾಡಿ ಶೀಲ್ ಮಾಡಲು 10 ನಿಮಿಷ ಬೇಕಾಯಿತು.

ನಾನು ಸ್ಯಾಂಪಲ್ ತೆಗೆದುಕೊಂಡು ಮುಂಜಾನೆ 7-30 ಗಂಟೆಗೆ ಹೋದೆನು. ಪರೀಕ್ಷೆ ಮಾಡಿ ಅದೇ ದಿನ ಸಾಯಂಕಾಲ 4-30 ಗಂಟೆಗೆ ಕೊಟ್ಟರು. ನಾನು ಧಾರವಾಡದಿಂದ ಮರಳಿ ಗೋಕಾಕ್ಕೆ 8-00 ಗಂಟೆಗೆ ಬಂದೆನು. ನನ್ನ ಹೇಳಿಕೆಯಲ್ಲಿ ಸಮಯದ ಬಗ್ಗೆ ನಮೂದಿಸಿಲ್ಲಾ ಎಂದರೆ ಸರಿ. ನಾನು ಧಾರವಾಡಕ್ಕೆ ಹೋಗಿದ್ದೆ ಎಂದು ತೋರಿಸಲು ಬಸ್ ಟಿಕೇಟ್ ಹಾಜರುಪಡಿಸಿರುವುದಿಲ್ಲ, ಈ ಪ್ರಕರಣಕ್ಕೆ ಅನುಕೂಲವಾಗಲು ಬೇರೆ ಪ್ರಕರಣದ ಮುದ್ದೆ ಮಾಲಿನ ರಸಾಯನಿಕ ಪರೀಕ್ಷೆ ವರದಿಯನ್ನು ಪ್ರಯೋಗಾಲಯದಿಂದ ಪಡೆದುಕೊಂಡಿದ್ದೆವೆ ಎಂದರೆ ಸರಿಯಲ್ಲ, ನಮ್ಮ ಕಚೇರಿಯಲ್ಲಿ ಉಳಿದ ಸ್ಯಾಂಪಲನ್ನು ನ್ಯಾಯಾಲಯದ ಮುಂದೆ ಮುದ್ದೆ ಮಾಲು ಅಂತಾ ಹಾಜರುಪಡಿಸಿದ್ದೆವೆ ಎಂದರೆ ಸರಿಯಲ್ಲ.

ಆರೋಪಿಯು ರಾಜನಕಟ್ಟಿ ಗ್ರಾಮದ ಗ್ರಾಮ ಪಂಚಾಯತಿಯ ಸದಸ್ಯ ಇದ್ದನು ಮತ್ತು ಈಗಲೂ ಇರುತ್ತಾನೆ ಎಂದರೆ ಗೊತ್ತಿಲ್ಲ, ರಾಜಕೀಯದವರ ಮಾತುಕೇಳಿ ಚಾಸಾ-1 ರವರು ಸುಳ್ಳು ಪಿರ್ಯಾದಿ ನೀಡಿದ್ದಾರೆ ಎಂದರೆ ಸರಿಯಲ್ಲ, ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳು ಸುಳ್ಳು ಇವೆ

ಎಂದರೆ ಸರಿಯಲ್ಲ, ನಾವು ಯಾವದೇ ಪಂಚನಾಮೆ ಮಾಡಿಲ್ಲಾ, ಕಚೇರಿಯಲ್ಲಿ ಕುಳಿತು ಪಂಚನಾಮೆ ತಯಾರಿಸಿದ್ದೆವೆ ಎಂದರೆ ಸರಿಯಲ್ಲ, ಆರೋಪಿಯ ಯಾವದೇ ತಪ್ಪು ಇರದಿದ್ದರೂ ಸುಳ್ಳು ಪ್ರಕರಣ ದಾಖಲಿಸಲಾಗಿದೆ ಎಂದರೆ ಸರಿಯಲ್ಲ, ನಾನು ಯಾವದೇ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ, ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.

Sd/-

2ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ.